ಅಭಿವ್ಯಕ್ತಿ

ಗಣೇಶ್ ಭಟ್ ವಾರಣಾಸಿ
ganeshabhatv@gmail.com

ಈ ಬಾರಿ ಸ್ವದೇಶಿ ಹೋರಾಟ ಚೈನೀಸ್ ಡ್ರ್ಯಾಗನ್ ವಿರುದ್ಧ

ಭಾರತದಲ್ಲಿ ಸ್ವದೇಶಿ ಚಳುವಳಿಯ ಆರಂಭವಾದದ್ದು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ. ಸ್ವದೇಶಿ ಚಳುವಳಿಯು ಸ್ವಾತಂತ್ರ್ಯ ಹೋರಾಟದ ಭಾಗವೇ ಆಗಿತ್ತು. ನಾಮಧಾರಿ ಸಿಖ್ಖ್ ಸಮುದಾಯದ ಧಾರ್ಮಿಕ ನಾಯಕರಾಗಿದ್ದ ಬಾಬಾ ರಾಮ್ ಸಿಂಗ್ ಕುಕ ಇವರು 1871ರಲ್ಲಿ ಮೊದಲ ಬಾರಿಗೆ ಇಂಗ್ಲೆಂಡ್ ನಿರ್ಮಿತ ಬಟ್ಟೆಬರೆಗಳನ್ನು ಹಾಗೂ ವಸ್ತುಗಳನ್ನು ಬಹಿಷ್ಕರಿಸಲು ತನ್ನ ಹಿಂಬಾಲಕರಾದ ನಾಮಧಾರಿ ಸಿಖ್ಖ್ ಸಮುದಾಯಕ್ಕೆ ಕರೆಕೊಟ್ಟರು. ನಂತರದ ದಿನಗಳಲ್ಲಿ ಬಾಲಗಂಗಾಧರ ತಿಲಕ್, ಮಾಧವ ಗೊವಿಂದ ರಾನಡೆ, ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ ಮೊದಲಾದವರಿಂದ ಬ್ರಿಟಿಷ್ ಆಡಳಿತದ ವ್ಯವಸ್ಥೆಗೆ ಎದುರಾಗಿ ಭಾರತೀಯ ಸ್ವದೇಶಿ ಆಂದೋಲನ ಬಲವಾಗತೊಡಗಿತು. 1905 ರಲ್ಲಿ ಲಾರ್ಡ್ ಕರ್ಜನ್ ರೂಪಿಸಿದ ಬಂಗಾಳದ ವಿಭಜನೆಯ ಪ್ರಸ್ತಾಪದ ವಿರುದ್ಧವಾಗಿ ಸ್ವದೇಶಿ ಹೋರಾಟ ಇನ್ನಷ್ಟು ಬಲವಾಯಿತು. ಸ್ವದೇಶಿ ಆಂದೋಲನಕ್ಕೆ ಸರಿಯಾದ ರೂಪುರೇಷೆ ಕೊಟ್ಟವರು ಮಹಾತ್ಮಾ ಗಾಂಧೀಜಿಯವರು. ಸ್ವದೇಶೀಯು ಸ್ವರಾಜ್ಯದ ಆತ್ಮವಾಗಿದೆ ಎಂದು ಗಾಂಧೀಜಿಯವರು ನಂಬಿದ್ದರು. ಗಾಂಧೀಜಿ ಕರೆಗೆ ಓಗೊಟ್ಟ ಭಾರತೀಯರು ದೇಶೀಯ ಗುಡಿಕೈಗಾರಿಕೆಯಾದ ಕೈಮಗ್ಗವನ್ನು ನಾಶ ಮಾಡಿದ ಬ್ರಿಟನ್ ಮ್ಯಾಂಚೆಸ್ಟರ್ ಬಟ್ಟೆಗಳನ್ನು ಬಹಿಷ್ಕರಿಸಿದರಲ್ಲದೆ ದೇಶದೆಲ್ಲೆಡೆ ಆ ಬಟ್ಟೆಗಳನ್ನು ಸುಟ್ಟು ಹಾಕಿ ಪ್ರತಿಭಟನೆ ನಡೆಸಿದರು. ಮೊದಲ ಹಂತದ ಸ್ವದೇಶಿ ಹೋರಾಟವು ಬ್ರಿಟಿಷರನ್ನು ಭಾರತದಿಂದೋಡಿಸುವಲ್ಲಿ ಯಶಸ್ವಿಯಾಯಿತು.

1992ರಲ್ಲಿ ಭಾರತವು ಜಾಗತೀಕರಣಕ್ಕೆ ತೆರೆದುಕೊಂಡಾಗ ಸ್ವದೇಶಿ ಚಳುವಳಿಗಳು ಮತ್ತೊಮ್ಮೆ ಗರಿಗೆದರಿದವು. ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣಗಳು ಭಾರತದಲ್ಲಿ ಸ್ವದೇಶಿ ಚಿಂತನೆಯ ಚರ್ಚೆಗಳನ್ನು ಹುಟ್ಟು ಹಾಕಿದವು. ಈ ವಿಚಾರವಾಗಿ ಸಾಕಷ್ಟು ರಾಜಕೀಯ ಹೋರಾಟ, ಪ್ರತಿಭಟನೆಗಳು ನಡೆದವು. ವಿದೇಶಿ ನೇರ ಹೂಡಿಕೆ, ವಿದೇಶಿ ತಂತ್ರಜ್ಞಾನ ಮೊದಲಾದ ವಿಚಾರಗಳು ಭಾರತೀಯ ಉದ್ಯಮವಲಯದಲ್ಲೂ ಒಂದಿಷ್ಟು ಆಂಜಿಕೆಯನ್ನು ಮೂಡಿಸಿದ್ದು ಸತ್ಯವೇ. ಆದರೆ ಆ ಸಂದರ್ಭದಲ್ಲಿ ಭಾರತದ ಪ್ರಧಾನಿಯಾಗಿದ್ದ ಪಿ.ವಿ. ನರಸಿಂಹರಾಯರಿಗೆ ಬಹುತೇಕ ಜಗತ್ತು ಒಪ್ಪಿಕೊಂಡ ಜಾಗತೀಕರಣಕ್ಕೆ ದೇಶವನ್ನು ತೆರೆದುಕೊಳ್ಳದೆ ಬೇರೆ ಉಪಾಯವೇ ಇರಲಿಲ್ಲ. ನರಸಿಂಹರಾಯರು ಭಾರತದ ಆರ್ಥಿಕ ಅಭಿವೃದ್ಧಿಗೆ ಅತೀ ಅಗತ್ಯವಾಗಿದ್ದ ಹಾಗೂ ಧನಾತ್ಮಕವಾದ ತಿರುವು ಕೊಟ್ಟು ಭಾರತವನ್ನು ಜಾಗತೀಕರಣಕ್ಕೆ ತೆರೆದರು. ಇವರ ನಂತರ ಅಧಿಕಾರಕ್ಕೆ ಬಂದ ವಾಜಪೇಯಿ ಸರಕಾರ, ಮನಮೋಹನ್ ಸಿಂಗ್ ಸರಕಾರ, ಮೋದಿ ಸರಕಾರಗಳೂ ಉದಾರೀಕರಣ ಆರ್ಥಿಕ ನೀತಿಯನ್ನೇ ಮುಂದುವರಿಸಿದವು.

ಇತ್ತೀಚೆಗೆ ದೇಶವನ್ನುದ್ದೇಶಿಸಿ ಮಾತನಾಡಿದ್ದ ಪ್ರಧಾನಿ ನರೇಂದ್ರ ಮೋದಿಯವರು ವೋಕಲ್ ಫಾರ್ ಲೋಕಲ್ ಎಂದು ಹೇಳಿ ಭಾರತೀಯರು ಸ್ವದೇಶಿ ವಸ್ತುಗಳನ್ನೇ ಹೆಚ್ಚು ಹೆಚ್ಚಾಗಿ ಬಳಸಬೇಕೆಂದು ಹೇಳಿದ್ದಾರೆ. ಕೋವಿಡ್ 19ರ ಕಾರಣದಿಂದ ಕುಸಿದಿರುವ ದೇಶದ ಆರ್ಥಿಕತೆಯನ್ನು ಸರಿಪಡಿಸಲು ಭಾರತೀಯರು ಸ್ಥಳೀಯವಾಗಿ ನಿರ್ಮಿತವಾಗುವ ವಸ್ತುಗಳನ್ನೇ ಖರೀದಿಸಿ ಎಂಬುದನ್ನು ಮೋದಿ ಹೇಳಿದ್ದಾರೆ. ಈ ಮೂಲಕ ನರೇಂದ್ರ ಮೋದಿ ಸ್ವದೇಶಿ ಚಿಂತನೆಯ ಕುರಿತು ಮತ್ತೊಮ್ಮೆ ಚರ್ಚೆಯನ್ನು ಹುಟ್ಟುಹಾಕಿದ್ದಾರೆ. ಭಾರತ ಜಾಗತೀಕರಣಕ್ಕೆ ತನ್ನನ್ನು ತಾನು ತೆರೆದುಕೊಂಡು ಬಹುತೇಕ 2 ದಶಕಗಳೇ ಸಂದಿವೆ. ಒಂದು ಕಡೆಯಲ್ಲಿ ಪ್ರಧಾನಿ ಮೋದಿ ವಿವಿಧ ದೇಶಗಳಿಗೆ ಭೇಟಿ ಕೊಟ್ಟು ಅಲ್ಲಿನ ಉದ್ಯಮಿಗಳು ಹಾಗೂ ಹೂಡಿಕೆದಾರೊಡನೆ ಮಾತುಕತೆ ನಡೆಸಿ ಭಾರತದಲ್ಲಿ ಉದ್ಯಮ ತೆರೆಯಲು ಹಾಗೂ ಹೂಡಿಕೆ ಮಾಡಲಿರುವ ವಿಪುಲ ಅವಕಾಶಗಳ ಬಗ್ಗೆ ಅವರನ್ನು ಮನವೊಲಿಸುತ್ತಿದ್ದಾರೆ. ಭಾರತದಲ್ಲಿ ಹೂಡಿಕೆ ಮಾಡಲು ಅನುಕೂಲವಾಗುವಂತೆ ಇಲ್ಲಿನ ಹಳೆಯ ಕಾನೂನುಗಳನ್ನು ತಿದ್ದುಪಡಿ ಮಾಡುತ್ತಿದ್ದಾರೆ. ಹೂಡಿಕೆದಾರರಿಗೆ ಮೇಕ್ ಇನ್ ಇಂಡಿಯಾದಡಿ ಭಾರತದಲ್ಲಿ ಉದ್ಯಮಗಳನ್ನು ಅಥವಾ ಕೈಗಾರಿಕೆಗಳನ್ನು ತೆರೆದು ಸಿದ್ಧ ವಸ್ತುಗಳನ್ನು ಉತ್ಪಾದಿಸಿ ದೇಶದಲ್ಲಿ ಹಾಗೂ ವಿದೇಶಗಳಲ್ಲಿ ಮಾರಾಟ ಮಾಡುವ ಅವಕಾಶಗಳನ್ನು ಮಾಡಿಕೊಡಲಾಗಿದೆ. ಇವೆಲ್ಲದರ ಪರಿಣಾಮವಾಗಿ ಭಾರತದಲ್ಲಿ ನೇರ ವಿದೇಶಿ ಹೂಡಿಕೆಯ ಪ್ರಮಾಣದಲ್ಲಿ ಭಾರೀ ಹೆಚ್ಚಳವಾಗಿದೆ. 2018-19ರಲ್ಲಿ ಭಾರತದಲ್ಲಿ 64.375 ಶತಕೋಟಿ ಡಾಲರ್‌ಗಳ ನೇರ ವಿದೇಶಿ ಹೂಡಿಕೆಯಾಗಿದೆ. ಐಫೋನ್ ಆಪಲ್, ಸ್ಯಾಮ್ಸಂಗ್, ವಿವೋ, ಓಪ್ಪೋ, ಕ್ಸಿಯೋಮಿ ರೆಡ್ ಮಿ ಮೊದಲಾದ ಮೊಬೈಲ್ ಕಂಪನಿಗಳು ಭಾರತದಲ್ಲಿ ಉತ್ಪಾದನಾ ಘಟಕಗಳನ್ನು ತೆರೆದಿವೆ. ಆಟೋಮೊಬೈಲ್ ಕ್ಷೇತ್ರದ ದಿಗ್ಗಜಗಳಾದ ಮರ್ಸಿಡಿಸ್ ಬೆಂಝ್, ಸುಜುಕಿ, ಬಿಎಂಡಬ್ಲ್ಯೂ, ಆಡಿ, ಸ್ಕೋಡಾ, ಹ್ಯುಂಡೈ ಮೊದಲಾದ ಕಂಪನಿಗಳು ಭಾರತದಲ್ಲಿ ಉತ್ಪಾದನಾ ಘಟಕಗಳನ್ನು ತೆರೆದಿವೆ. ಇಷ್ಟೆಲ್ಲ ಹಾದಿಯನ್ನು ಕ್ರಮಿಸಿಯಾದ ಮೇಲೆ ಮೋದಿ ಪುನಃ ಹಳೇ ಸ್ವದೇಶಿ ರಾಗವನ್ನೇ ಏಕೆ ತೆರೆದರು ಎಂಬ ಬಗ್ಗೆ ಟೀಕೆ ಟಿಪ್ಪಣಿಗಳಾಗುತ್ತಿವೆ. ಆದರೆ ನರೇಂದ್ರ ಮೋದಿಯವರು ಸ್ಥಳೀಯ ಉತ್ಪಾದಕರಿಂದ ಖರೀದಿ ಮಾಡಿ ಎಂದು ಹೇಳಿರುವುದು ದೇಶದಲ್ಲಿ ಚೀನಾ ನಿರ್ಮಿತ ವಸ್ತುಗಳ ಪಾರಮ್ಯವನ್ನು ಕೊನೆಗೊಳಿಸಲು.

ಚೀನಾ ಈಗ ಜಾಗತಿಕವಾಗಿ ಎರಡನೇ ಅತಿ ದೊಡ್ಡ ಆರ್ಥಿಕ ಶಕ್ತಿ. ಚೀನಾದ ವಾರ್ಷಿಕ ಜಿಡಿಪಿ ಸುಮಾರು 14 ಲಕ್ಷ ಕೋಟಿ ಅಮೆರಿಕನ್ ಡಾಲರ್. ಚೀನಾ ಈಗ ಜಾಗತಿಕ ಉತ್ಪಾದನಾ ಹಾಗೂ ಪೂರೈಕೆಯ ದೇಶವಾಗಿ ಬದಲಾಗಿದೆ. ಜಗತ್ತಿನ ಎಲ್ಲಾ ರಾಷ್ಟ್ರಗಳಿಗೆ ಚೀನಾ ತನ್ನ ಸಿದ್ಧ ಉತ್ಪನ್ನಗಳನ್ನು ಪೂರೈಸುತ್ತಿದೆ. ಜಗತ್ತಿನಲ್ಲಿ ಅತೀ ಹೆಚ್ಚು ನಿರ್ಯಾತವನ್ನು ಮಾಡುತ್ತಿರುವ ದೇಶ ಚೀನಾ. 2019ರಲ್ಲಿ ಆ ದೇಶವು 2.49 ಲಕ್ಷ ಕೋಟಿ ಡಾಲರ್ ಮೊತ್ತದ ಉತ್ಪನ್ನಗಳನ್ನು ನಿರ್ಯಾತ ಮಾಡಿದೆ. ಚೀನಾದ ತನ್ನ ಒಟ್ಟು ನಿರ್ಯಾತದಲ್ಲಿ ಸುಮಾರು ಶೇ.16.8 ವಸ್ತುಗಳನ್ನು ಅಮೆರಿಕ ದೇಶಕ್ಕೆ, ಶೇ.11.2 ರಷ್ಟನ್ನು ಹಾಂಕಾಂಗ್‌ಗೆ, ಶೇ.5.7, ಜಪಾನ್‌ಗೆ ಶೇ.4.4, ದಕ್ಷಿಣ ಕೋರಿಯಾಗೆ, ಶೇ.3.9, ವಿಯಟ್ನಾಂಗೆ ಶೇ.3.2, ಜರ್ಮನಿಗೆ ಹಾಗೂ ಭಾರತಕ್ಕೆ ಶೇ.3ರಷ್ಟನ್ನು ಕಳುಹಿಸುತ್ತಿದೆ. ಇನ್ನು ಭಾರತದ ಮಟ್ಟಿಗೆ ಹೇಳುವುದಾದರೆ ಭಾರತಕ್ಕೆ

ಆಗುತ್ತಿರುವ ಆಮದಿನಲ್ಲಿ ಸಿಂಹಪಾಲು ಸಲ್ಲುವುದು ಚೀನಾಕ್ಕೆ. 2018-19ರಲ್ಲಿ ಚೀನಾ ಹಾಗೂ ಭಾರತದ ನಡುವೆ 87.5 ಶತಕೋಟಿ ಡಾಲರ್‌ಗಳ ವಹಿವಾಟು ನಡೆದಿದೆ. ಚೀನಾವು ಭಾರತಕ್ಕೆ ಮಾಡಿದ ರಫ್ತಿನ ಪಾಲು 53.56 ಶತಕೋಟಿ ಡಾಲರ್ ಹಾಗೂ ಭಾರತವು ಚೀನಾಗೆ ಮಾಡಿದ ರಫ್ತಿನ ಪಾಲು 33.51 ಶತಕೋಟಿ ಡಾಲರ್‌ಗಳು. ಆ ವರ್ಷದಲ್ಲಿ ಭಾರತವು ಚೀನಾಗೆ ಮಾಡಿದ ರಫ್ತಿನ ಮೊತ್ತಕ್ಕಿಂತ ಸುಮಾರು 20 ಶತಕೋಟಿ ಡಾಲರ್‌ಗಳಷ್ಟು ಹೆಚ್ಚು ಮೌಲ್ಯದ ವಸ್ತುಗಳನ್ನು ಚೀನಾವು ಭಾರತಕ್ಕೆ ರಫ್ತು ಮಾಡಿದೆ. ಭಾರತ ಹಾಗೂ ಚೀನಾದ ನಡುವಿನ ವ್ಯಾಪಾರ ವ್ಯವಹಾರದ ಸಮತೋಲನವು ಚೀನಾದ ಪರವಾಗಿದ್ದು ಚೀನಾಗೆ ಲಾಭದಾಯಕವೂ, ಭಾರತಕ್ಕೆ ಬಹಳ ನಷ್ಟದಾಯಕವೂ ಆಗಿದೆ. ಇದೇ ಸಂದರ್ಭದಲ್ಲಿ ಭಾರತ ಮತ್ತು ಅಮೆರಿಕದ ಭಾರತ ಹಾಗೂ ಅಮೆರಿಕದ ನಡುವೆ ಶೇ.87.95 ಶತಕೋಟಿ ಡಾಲರ್‌ಗಳ ವಹಿವಾಟು ನಡೆದಿದ್ದು ಭಾರತದಿಂದ ಅಮೆರಿಕಾಗೆ ಮಾದಲಾದ ರಫ್ತಿನ ಮೊತ್ತ 52.4 ಶತಕೋಟಿ ಡಾಲರ್‌ಗಳಾದರೆ ಅಮೆರಿಕದಿಂದ ಭಾರತಕ್ಕೆ ಮಾಡಲಾದ ರಫ್ತಿನ ಮೊತ್ತ 35.55 ಶತಕೋಟಿ ಡಾಲರ್‌ಗಳಾಗಿವೆ. ಅಮೆರಿಕ ಹಾಗೂ ಭಾರತದ ನಡುವಿನ ವ್ಯವಹಾರದಲ್ಲಿ ಭಾರತಕ್ಕೆ 16.85 ಶತಕೋಟಿ ಡಾಲರ್‌ಗಳಷ್ಟು ಹೆಚ್ಚುವರಿ ಲಭ್ಯಸಿದ್ದು ವ್ಯಾಪಾರದ ಸಮತೋಲನವು ಭಾರತದ ಪರವಾಗಿದೆ ಹಾಗೂ ಲಾಭದಾಯಕವಾಗಿದೆ.

ಕಳೆದೆರಡು ದಶಕಗಳಿಂದ ಚೀನಾ ಉತ್ಪನ್ನಗಳು ಭಾರತೀಯ ಮಾರುಕಟ್ಟೆಯನ್ನು ಸದ್ದಿಲ್ಲದೆ ಆಕ್ರಮಿಸಿಕೊಂಡಿವೆ. ಮೊದಮೊದಲು ತನ್ನ ಡಂಪಿಂಗ್ ಆರ್ಥಿಕ ನೀತಿಯ ಮೂಲಕ ಉತ್ಪನ್ನಗಳನ್ನು ಅತೀ ಕಡಿಮೆ ಬೆಲೆಗೆ ಭಾರತೀಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಿತು ಚೀನಾ. ಚೀನಾದ ಪೂರೈಕೆಯ ಜಾಲ ಎಷ್ಟು ಪ್ರಬಲವಾಗಿದೆಯೆಂದರೆ ಭಾರತದಲ್ಲಿ ಮೊಬೈಲ್ ಫೋನ್, ಬ್ಯಾಗ್, ರೆಡಿಮೇಡ್ ಬಟ್ಟೆ, ಎಲೆಕ್ಟ್ರಾನಿಕ್ಸ್ ವಸ್ತುಗಳು, ಆಟಿಕೆಗಳು, ಮುಂತಾದವುಗಳನ್ನು ಮಾರಾಟ ಮಾಡುವುದಲ್ಲದೆ, ದೀಪಾವಳಿಯಂಥ ಹಬ್ಬದ ಸಂದರ್ಭದಲ್ಲಿ ಹಣತೆ, ಗೂಡುದೀಪಗಳು, ಪಟಾಕಿ, ಸುಡುಮದ್ದು, ಚೌತಿಯ ಸಂದರ್ಭದಲ್ಲಿ ಪೂಜೆಗೆ ಕೂರಿಸುವ ಗಣಪತಿಯ ಮೂರ್ತಿಯಂಥವುಗಳನ್ನು ಕೂಡಾ ಚೀನಾ ತಯಾರಿಸಿ ಭಾರತದ ಮಾರುಕಟ್ಟೆಗೆ ತಲುಪಿಸುವಷ್ಟು ಸಮರ್ಥವಾಗಿದೆ. ಕತ್ತರಿ, ಸೂಜಿ, ಬ್ಯಾಟ್, ಬಾಲ್, ಪೆನ್ಸಿಲ್, ಪೆನ್ ಮೊದಲಾದ ವಸ್ತುಗಳನ್ನು ಕೂಡಾ ಚೀನಾ ತಯಾರಿಸಿ ಭಾರತದ ಮಾರುಕಟ್ಟೆಗೆ ತಂದು ಸುರಿಯುತ್ತಿದೆ. ಈ ಮೊದಲು ಸ್ಥಳೀಯ ಅಗತ್ಯತೆಗಳಿಗೆ ಬೇಕಾದ ವಸ್ತುಗಳನ್ನು ದೇಶದಲ್ಲಿ ತಯಾರು ಮಾಡುತ್ತಿದ್ದ ಭಾರತದ ಬಹಳಷ್ಟು ಕೈಗಾರಿಕೆಗಳು ಹಾಗೂ ಗುಡಿ ಕೈಗಾರಿಕೆಗಳು ಚೀನಾದ ದರ ಸಮರದೆದುರು ಸಂಪೂರ್ಣವಾಗಿ ಸೋತು, ನಾಶವಾಗಿ ಹೋದವು. ಹೀಗಾಗಿ ಬಹಳಷ್ಟು ಉತ್ಪನ್ನಗಳ ಪೂರೈಕೆ ವಿಚಾರವಾಗಿ ಚೀನಾ ಏಕಸ್ವಾಮ್ಯವನ್ನು ಸಾಧಿಸಿತು.

ಅಧಿಕೃತ ಮಾರುಕಟ್ಟೆಯ ಮೂಲಕ ಎಲೆಕ್ಟ್ರಾನಿಕ್ ವಸ್ತುಗಳು, ಮೊಬೈಲ್ ಫೋನ್‌ಗಳು, ಸೋಲಾರ್ ಉಪಕರಣಗಳು, ಮೆಶಿನ್‌ಗಳು, ಪಂಪ್‌ಗಳು, ಸಾವಯವ ರಾಸಾಯನಿಕಗಳು, ರಸಗೊಬ್ಬರ, ಕಬ್ಬಿಣ ಮತ್ತು ಉಕ್ಕು ಮೊದಲಾದವುಗಳು ಭಾರತದ ಮಾರುಕಟ್ಟೆಯನ್ನು ಪ್ರವೇಶಿಸಿ ಸ್ಪರ್ಧಾತ್ಮಕ ದರದೊಂದಿಗೆ ಮಾರಾಟವಾಗುತ್ತಿವೆ. ಚೀನಾ ವಸ್ತುಗಳು ಭಾರತದ ಮಾರುಕಟ್ಟೆಯನ್ನು ಅಧಿಕೃತವಾಗಿ ಪ್ರವೇಶಿಸುವುದನ್ನು ಸರಕಾರಕ್ಕೆ ತಡೆಯಲಾಗುತ್ತಿಲ್ಲ. ಏಕೆಂದರೆ ಚೀನಾ ವಿಶ್ವ ವ್ಯಾಪಾರ ಸಂಸ್ಥೆಯ ನಿಯಮಗಳನ್ನೆಲ್ಲ ತನ್ನ ಅನುಕೂಲಕ್ಕೆ ಸರಿಯಾಗಿ ಬಗ್ಗಿಸಿಕೊಂಡಿದೆ. ತನ್ನ ವಸ್ತುಗಳನ್ನು ಯಾವ ದೇಶಗಳೂ ನಿರ್ಬಂಧಿಸದಂತಹ ಪರಿಸ್ಥಿತಿಯನ್ನು ನಿರ್ಮಿಸಿಕೊಂಡಿದೆ. ಹೀಗಾಗಿ ಭಾರತ ಸರಕಾರಕ್ಕೆ ಚೀನಾ ವಸ್ತುಗಳ ಭಾರತ ಪ್ರವೇಶವನ್ನು ನಿಷೇಧಿಸುವಂತಿಲ್ಲ. ನರೇಂದ್ರ ಮೋದಿಯವರು ತನ್ನ ಭಾಷಣದಲ್ಲಿ ಸ್ಥಳೀಯ ಉತ್ಪನ್ನಗಳನ್ನೇ ಖರೀದಿಸಿ ಎಂದು ಹೇಳಿದುದರ ಹಿಂದಿನ ಪರೋಕ್ಷ ಉದ್ದೇಶ ಚೀನೀ ವಸ್ತುಗಳನ್ನು ಖರೀದಿಸದಿರಿ ಎನ್ನುವುದೇ ಆಗಿದೆ.

ಚೀನಾದ ವಸ್ತುಗಳ ಒಳಹರಿವಿನಿಂದಾಗಿ ದೇಶದ ದೇಶದ ಅತೀಸಣ್ಣ, ಸಣ್ಣ ಹಾಗೂ ಮಧ್ಯಮ ಮಟ್ಟದ ಉದ್ದಿಮೆಗಳು ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿವೆ. ನವೋದ್ಯಮ (ಸ್ಟಾರ್ಟ್ ಅಪ್) ಗಳಿಗೆ ತಲೆ ಎತ್ತಲು ಆಗದಂತಹ ಪರಿಸ್ಥಿತಿ ಎದುರಾಗುತ್ತಿದೆ. ಹೊಸತನ್ನು ಅನ್ವೇಷಣೆ ಮಾಡುವ ಪ್ರತಿಭಾವಂತರು ಮೂಲೆಗುಂಪಾಗುತ್ತಿದ್ದಾರೆ. ನಮ್ಮ ದೇಶದ ಅವಶ್ಯಕತೆಯನ್ನು ಪೂರೈಸಬಲ್ಲ ಕ್ಷಮತೆ ನಮ್ಮ ದೇಶದ ಉದ್ದಿಮೆಗಳಿಗೆ ಇವೆ. ಉದಾಹರಣೆಗೆ ನಮ್ಮ ದೇಶದಲ್ಲಿ ಮೊದಲು ಒಂದೇ ಒಂದು ಪಿಪಿಇ ಕಿಟ್ (ಕರೋನಾದಂಥ ಸಾಂಕ್ರಾಮಿಕ ರೋಗಿಗಳಿಗೆ ಚಿಕಿತ್ಸೆ ಕೊಡುವ ವೈದ್ಯರು ಹಾಗೂ ದಾದಿಯರು ಧರಿಸುವ ಸಂಪೂರ್ಣ ಸೋಂಕು ನಿರೋಧಕ ವೈಯಕ್ತಿಕ ರಕ್ಷಣಾ ಕವಚ) ಕೂಡಾ ತಯಾರಾಗುತ್ತಿರಲಿಲ್ಲ. ಎಲ್ಲಾ ಆಸ್ಪತ್ರೆಗಳೂ ವಿದೇಶಗಳಿಂದ ಆಮದಾಗುವ ಪಿಪಿಇಗಳನ್ನೇ ಆಶ್ರಯಿಸುತ್ತಿದ್ದವು. ಆದರೆ ಕರೋನಾ ಸಂದಿಗ್ಧದಲ್ಲಿ ಭಾರತಕ್ಕೆ ಲಕ್ಷಾಂತರ ಪಿಪಿಇ ಕಿಟ್‌ಗಳ ಅವಶ್ಯಕತೆ ಬಂದಾಗ ಭಾರತೀಯ ಕಂಪನಿಗಳೇ ಪಿಪಿಇಗಳ ಉತ್ಪಾದನೆಗೆ ತೊಡಗಿ ಈಗ ದಿನವೊಂದಕ್ಕೆ 4 ಲಕ್ಷಗಳಿಗಿಂತಲೂ ಹೆಚ್ಚು ಪಿಪಿಇಗಳು ಭಾರತದಲ್ಲಿ ತಯಾರಾಗುತ್ತಿವೆ. ಮೊದಲು ಆಸ್ಪತ್ರೆಗಳ ವೆಂಟಿಲೇಟರ್ ಯಂತ್ರಗಳನ್ನು ಜರ್ಮನಿ, ಚೀನಾದಂತಹ ದೇಶಗಳಿಂದ ದುಬಾರಿ ಬೆಲೆ ಕೊಟ್ಟು ತರಿಸಲಾಗುತ್ತಿತ್ತು. ಕರೋನಾ ಕಾರಣದಿಂದ ದೇಶದ ಆಸ್ಪತ್ರೆಗಳಲ್ಲಿ ವೆಂಟಿಲೇಟರ್‌ಗಳ ಕೊರತೆ ಕಂಡು ಬಂದಾಗ ದೇಶದ ಸಂಸ್ಥೆಗಳು ವೆಂಟಿಲೇಟರ್‌ಗಳ ನಿರ್ಮಾಣಕ್ಕೆ ಮನಸು ಮಾಡಿದವು. ಮಹೀಂದ್ರ ಕಂಪನಿ, ಸುಜುಕಿ ಸಂಸ್ಥೆ, ಭಾರತೀಯ ರೈಲ್ವೇ ಮೊದಲಾದ ಸಂಸ್ಥೆಗಳು ಕಡಿಮೆ ವೆಚ್ಚದ ವೆಂಟಿಲೇಟರ್‌ಗಳನ್ನು ನಿರ್ಮಿಸಿವೆ. ಅದೇ ರೀತಿ ಸ್ಟಾರ್ಟ್‌ಅಪ್ ಸಂಸ್ಥೆಗಳೂ ಕಡಿಮೆ ಬೆಲೆಯ ಸುಲಭ ಬಳಕೆಯ ವೆಂಟಿಲೇಟರ್‌ಗಳನ್ನು ಕಂಡುಹಿಡಿದು ತಯಾರಿಸುವ ಕೆಲಸವನ್ನು ಆರಂಭಿಸಿವೆ. ಉದಾಹರಣೆಗೆ ನೋಯ್ಡಾದ ಅಗ್ವಾ ಹೆಲ್ತ್ ಕೇರ್ ಸುಮಾರು 1.5 ಲಕ್ಷ ರು. ಬೆಲೆಗೆ ವೆಂಟಿಲೇಟರ್ ನಿರ್ಮಾಣ ಮಾಡುತ್ತಿದ್ದು(ಮಾರುಕಟ್ಟೆಯಲ್ಲಿ ವೆಂಟಿಲೇಟರ್ ಒಂದರ ಬೆಲೆ 4 ರಿಂದ 5 ಲಕ್ಷ ರುಪಾಯಿಗಳು) ಈಗಾಗಲೇ 17,000 ವೆಂಟಿಲೇಟರ್ ಗಳ ನಿರ್ಮಾಣಕ್ಕೆ ಆರ್ಡರ್‌ಗಳನ್ನು ಪಡೆದುಕೊಂಡಿದೆ. ಬೆಂಗಳೂರಿನ ಬಯೋಡಿಸೈನ್ ಇನ್ನೋವೇಷನ್ ಲ್ಯಾಬ್ಸ್ 50 ರಿಂದ 70 ಸಾವಿರ ರುಪಾಯಿಗಳಷ್ಟು ಬೆಲೆಗೆ ವೆಂಟಿಲೇಟರ್‌ಗಳ ನಿರ್ಮಾಣ ಮಾಡುತ್ತಿದೆ. ಈ ಸ್ಟಾರ್ಟ್ ಅಪ್ 3000 ಸಾವಿರ ವೆಂಟಿಲೇಟರ್‌ಗಳನ್ನು ನಿರ್ಮಿಸಲಿದೆ. ಅದೇ ರೀತಿ ಪುಣೆಯ ಸ್ಟಾರ್ಟ್ ಅಪ್ ನೊಕ್ಕಾ ರೋಬೋಟಿಕ್ಸ್ ಕೂಡಾ ಕಡಿಮೆ ಬೆಲೆಯ ವೆಂಟಿಲೇಟರ್‌ಗಳ ನಿರ್ಮಾಣಕ್ಕೆ ತೊಡಗಿದೆ. ಈಗ ಭಾರತದಲ್ಲಿ 50,000ಕ್ಕೂ ಹೆಚ್ಚು ಸ್ಟಾರ್ಟ್ ಅಪ್‌ಗಳಿದ್ದು ಭಾರತೀಯರ ಹಾಗೂ ವಿಶ್ವದ ಜನತೆಯ ವಿವಿಧ ಆವಶ್ಯಕತೆಗಳನ್ನು ಪೂರೈಸುವಷ್ಟು ಸಮರ್ಥವಾಗಿ ಬೆಳೆದಿವೆ. ಇವಕ್ಕೆ ಭಾರತ ಸರಕಾರ ಹಾಗೂ 130 ಕೋಟಿ ಸಂಖ್ಯೆಯ ಜನತೆ ಬೆಂಬಲ ಕೊಡಬೇಕಷ್ಟೇ.

ಆರ್ಥಿಕ ವಹಿವಾಟುಗಳಲ್ಲಿ ಭಾರತದಿಂದ ಬಹಳಷ್ಟು ಪ್ರಯೋಜನಗಳನ್ನು ಪಡೆಯುತ್ತಿದ್ದರೂ ರಾಜಕೀಯವಾಗಿ ಚೀನಾದ ಬೆಂಬಲವಿರುವುದು ಭಾರತ ವಿರೋಧಿ ದೇಶವಾದ ಪಾಕಿಸ್ತಾನಕ್ಕೆ. ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಭಾರತಕ್ಕೆ ಹಿನ್ನಡೆಯನ್ನು ಉಂಟು ಮಾಡುವುದೇ ಚೀನಾದ ಕೆಲಸವಾಗಿದೆ. ಇತ್ತೀಚೆಗೆ ನೇಪಾಳವನ್ನು ಕೂಡ ಭಾರತದ ವಿರುದ್ಧ ಎತ್ತಿಕಟ್ಟುವ ಕಾಯಕದಲ್ಲಿ ಚೀನಾ ತೊಡಗಿದೆ. ಚೀನಾವು ಭಾರತದಿಂದ ಲಾಭ ಪಡೆಯುವುದನ್ನು ತಡೆಯಲು ಭಾರತೀಯ ಪ್ರಜೆಗಳಿಂದ ಮಾತ್ರ ಸಾಧ್ಯ. ಚೀನಾ ಮೇಡ್ ವಸ್ತುಗಳನ್ನು ಬಹಿಷ್ಕರಿಸುವುದರ ಮೂಲಕ ಹೊಸ ಸ್ವದೇಶಿ ಹೋರಾಟವನ್ನು ಯಶಸ್ವಿಗೊಳಿಸಬೇಕಿದೆ. ಚೀನಾವನ್ನು ಉತ್ಪನ್ನಗಳನ್ನು ದೇಶದಿಂದ ಹೊರಗೆ ಹಾಕಬೇಕಿದೆ, ಆ ಮೂಲಕ ಚೀನಾವನ್ನು ಸೋಲಿಸಬೇಕಿದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಆಯುಷ್ಮಾನ್ ಯೋಜನೆಗೆ ಮತ್ತಷ್ಟು ಸುಧಾರಣೆ ತನ್ನಿ

ಆಯುಷ್ಮಾನ ಭಾರತ ಯೋಜನೆಯು ಭಾರತೀಯರ